ಕಥೆ

# ಅವಳು ಹೇಳಿದ್ದಳು




ಮೂಲ ಹಿಂದಿ: **ಚಂದ್ರಧರ ಶರ್ಮಾ 'ಗುಲೇರಿ'**
ಕನ್ನಡಕ್ಕೆ: **ಸುಮಂಗಲಾ ಎಸ್. ಮುಮ್ಮಿಗಟ್ಟಿ**

ಕಲೆ: ವಿ.ಎಂ.ಮಂಜುನಾಥ್

1

ದೊಡ್ಡ ದೊಡ್ಡ ಶಹರಗಳ ಟಾಂಗಾವಾಲಾಗಳ ನಾಲಿಗೆಯ ಚಾಟಿ ಏಟುಗಳಿಂದ ಯಾರ ಚರ್ಮ ಸುಲಿದು ಹೋಗಿದೆಯೊ, ಕಿವಿಗಳು ಕಿವುಡಾಗಿವೆಯೊ, ಅವರು ಅಮೃತಸರದ ಬಿದಿರು ಬಂಡಿಯವರ ಗ್ರಾಮೀಣ ಆಡುಭಾಷೆಯ ಮುಲಾಮು ಹಚ್ಚಿಕೊಳ್ಳಲಿ ಎಂದು ಅವರಿಗೆ ನಮ್ಮ ಪ್ರಾರ್ಥನೆ. ಯಾವಾಗ ದೊಡ್ಡ ಶಹರಗಳ ಅಗಲವಾದ ರಸ್ತೆಗಳ ಮೇಲೆ ಕುದರೆಯ ಮೇಲೆ ಚಾಟಿ ಬೀಸುತ್ತ ಬೆನ್ನನ್ನು ಸುಲಿಯುತ್ತ, ಯಾವ ಟಾಂಗಾವಾಲಾಗಳು ಒಮ್ಮೊಮ್ಮೆ ಕುದರೆಯ ಅಜ್ಜಿಯೊಂದಿಗೆ ತಮ್ಮ ಸಂಬಂಧವನ್ನು ಸ್ಥಿರಗೊಳಿಸುತ್ತ, ಒಮ್ಮೊಮ್ಮೆ ದಾರಿಹೋಕರ ಕಣ್ಣು ಕಾಣಿಸದಂತೆ ನಡೆದುಕೊಂಡು ಹೋಗುವುದನ್ನು ನೋಡಿ ಕರುಣೆ ಪಡುತ್ತ, ಒಮ್ಮೊಮ್ಮೆ ಅವರ ಪಾದಗಳ ಬೆರಳು ಸಂದಿಗಳನ್ನು ಹರಿದು ತಮಗೆ ತೊಂದರೆ ಕೊಟ್ಟವರೆಂದು ಹೇಳುತ್ತ ಮತ್ತೆ ಜಗತ್ತಿನ ನೋವು, ನಿರಾಶೆ ಮತ್ತು ಕ್ಷೋಭೆಯ ಅವತಾರವೆಂದುಕೊಂಡು ತಮ್ಮ ಮೂಗಿನ ನೇರಕ್ಕೆ ನಡೆಯುತ್ತಾರೆ, ಅಂಥ ಸಮಯದಲ್ಲಿ ಅಮೃತಸರದಲ್ಲಿ ಅವರ ಸಮುದಾಯದವರು ಇಕ್ಕಟ್ಟಾದ ಗಲ್ಲಿಗಳಲ್ಲಿ ತಿರುಗಾಡುತ್ತಿರುವ ಪ್ರತಿಯೊಬ್ಬರಿಗಾಗಿ ನಿಂತುಕೊಂಡು ಸಹನೆಯ ಸಾಗರವನ್ನು ಉಕ್ಕಿಸಿ 'ಪಕ್ಕಕ್ಕೆ ಸರಿಯಿರಿ ತಾಯಂದಿರೆ', 'ಬಾಜು ನಿಂತುಕೊಳ್ಳಿ ಸಹೋದರರೆ, 'ಬರಲಿ ಬಿಡಿ ರಾಯರೆ', 'ಸರಿ ಮಗು' ಎನ್ನುತ್ತ ಬಿಳಿ ರುಮಾಲಿನವರ, ತಳ್ಳುಗಾಡಿಯ ವ್ಯಾಪಾರಿಗಳ, ಎಮ್ಮೆ-ಆಕಳು, ಕತ್ತೆ-ಕೋಳಿ ಮುಂತಾದವುಗಳ ದಟ್ಟಣೆಯ ಮಧ್ಯದಿಂದ ದಾರಿ ಮಾಡಿಕೊಳ್ಳುತ್ತಾರೆ. 'ಸಾಹೇಬ' ಶಬ್ದ ಕೇಳದೆ ಯಾರಾದರೂ ಪಕ್ಕಕ್ಕೆ ಸರಿಯುವುದು ಸಾಧ್ಯವೇ! ಅವರ ನಾಲಿಗೆ ಮಾತಾಡುವುದೇ ಇಲ್ಲ, ಎಂದಲ್ಲ. ಮಾತಾಡುತ್ತದೆ, ಆದರೆ ಸಿಹಿ ಚೂರಿಯಂತೆ ಸೂಕ್ಷ್ಮವಾಗಿ ಏಟು ಕೊಡುತ್ತದೆ. ಒಂದು ವೇಳೆ ಮತ್ತೆ ಮತ್ತೆ ಎಚ್ಚರಿಸಿದರೂ ಯಾರಾದರೂ ವೃದ್ಧೆ ದಾರಿಯಿಂದ ಪಕ್ಕಕ್ಕೆ ಸರಿಯುವುದಿಲ್ಲವಾದರೆ ಅವರ ವಚನಾವಲಿಯ ನಮೂನೆಗಳು ಇಂತಿವೆ- ಬಾಜು ಬಾಜು, ಇನ್ನೂ ಬದುಕಲು ಯೋಗ್ಯ ಯೋಗಿನಿ, ಬಾಜುಸರಿ, ಬಾಜುಸರಿ ಮಕ್ಕಳಿಗೆ ಪ್ರಿಯಳಾದವಳೆ, ಪಾರಾಗು ದೀರ್ಘಾಯುವುಳ್ಳವಳೆ' ಒಟ್ಟಾರೆ ಇದರರ್ಥ ಹೀಗಿದೆ- ನೀನು ಬದಕಲು ಯೋಗ್ಯಳಾಗಿರುವಿ, ನೀನು ಭಾಗ್ಯಶಾಲಿ, ಮಕ್ಕಳಿಗೆ ಪ್ರಿಯಳಾಗಿರುವೆ, ದೀರ್ಘಾಯುಷಿ. ನೀನೇಕೆ ನನ್ನ ಟಾಂಗಾದ ಗಾಲಿಗಳ ಕೆಳಗೆ ಬರಲಿಚ್ಛಿಸುತ್ತಿ? ಪಾರಾಗಿ ಹೋಗು.

ಇಂಥ ಬಿದಿರು ಬಂಡಿಯವರ, ಟಾಂಗಾವಾಲಾಗಳ